# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **748**
ಸದಸ್ಯರ ಹೆಸರು : ಶ್ರೀ ಮುನಿರಾಜುಗೌಡ ಪಿ.ಎಂ.
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : **22.02.2023.**
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ.25 ಅನ್ನು ಯಾವಾಗ ಹರಾಜು ಮಾಡಲಾಯಿತು; ಹರಾಜಿನಲ್ಲಿ ಸದರಿ ಜಮೀನನ್ನು ಖರೀದಿಸಿದವರು (ಕೊಂಡವರು) ಯಾರು; | ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಸೋಮಶೆಟ್ಟಿಹಳ್ಳಿ ಗ್ರಾಮ ಸರ್ವೆ ನಂ.25 ರಲ್ಲಿ 28-28 ಎ/ಗುಂ ವಿಸ್ತೀರ್ಣದ ಜಮೀನನ್ನು ವಿಶೇಷ ಜಿಲ್ಲಾಧಿಕಾರಿ, ಜಾರಿದಳ, ಅನಧಿಕೃತ ನಿರ್ಮಾಣಗಳ ತಡೆಕೋಶ, ಬೆಂಗಳೂರು ರವರ ಹರಾಜು ಪ್ರಕಟಣೆ ದಿನಾಂಕ:17-05-2007ರಂತೆ ಶ್ರೀ ಸಿ.ರಾಮಯ್ಯ ರೆಡ್ಡಿ ಬಿನ್ ಲೇ ಚಿನ್ನಪ್ಪ ರೆಡ್ಡಿ ಇವರು ಖರೀದಿಸಿರುತ್ತಾರೆ. |
| ಆ) | ಹರಾಜಿನಲ್ಲಿ ಖರೀದಿಸಿದ ವ್ಯಕ್ತಿಗೆ ಸದರಿ ಆಸ್ತಿಯನ್ನು ಹಸ್ತಾಂತರ ಮಾಡಲಾಗಿದೆಯೇ; ಮಾಡದಿದ್ದಲ್ಲಿ ಮಾಡದಿರಲು ಕಾರಣಗಳೇನು; | ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 265 ಎಲ್‌ಜಿಬಿ 2007 (ಪಿ5), ದಿನಾಂಕ:30-07-2007 ರಲ್ಲಿ ಸದರಿ ಹರಾಜನ್ನು ಸ್ಥಿರೀಕರಿಸಲು ಅನುಮತಿ ನೀಡಲಾಗಿರುತ್ತದೆ. ಅದರಂತೆ, ಹರಾಜಿನಲ್ಲಿ ಖರೀದಿಸಿದ ಶ್ರೀ ಸಿ.ರಾಮಯ್ಯ ರೆಡ್ಡಿ ಬಿನ್ ಲೇಟ್ ಚಿನ್ನಪ್ಪರೆಡ್ಡಿ ರವರಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 179 ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು, 1966 ನಿಯಮ 124(4)ರಡಿ ವಿಧಿಸಬಹುದಾದ ಸ್ಟ್ಯಾಂಪ್ ಮೊತ್ತವನ್ನು ವಿಧಿಸಿ, ನೋಂದಣಿ ಪತ್ರ (ಫಾರಂ 41)ನ್ನು ನೀಡಲಾಗಿರುತ್ತದೆ.<br><br>ಅದರಂತೆ ಉಪನೋಂದಾಣಿಕಾರಿಗಳ ಕಛೇರಿಯಲ್ಲಿ ರಿ.ನಂ.3070/2008-09, ದಿನಾಂಕ:27.12.2008 ರಂತೆ ಶ್ರೀ ಸಿ.ರಾಮಯ್ಯ ರೆಡ್ಡಿ ಬಿನ್ ಲೇಟ್ ಚಿನ್ನಪ್ಪರೆಡ್ಡಿ ರವರಿಗೆ ಎಂ.ಆರ್. ನಂ.24/2008-09ರಂತೆ ಕಂದಾಯ ದಾಖಲೆಗಳಲ್ಲಿ ಖಾತೆ ಆಗಿರುತ್ತದೆ.<br><br>ಶ್ರೀ ಸಿ.ರಾಮಯ್ಯ ರೆಡ್ಡಿ ಬಿನ್ ಲೇಟ್ ಚಿನ್ನಪ್ಪರೆಡ್ಡಿ ಇವರು ಪೃಥ್ವಿನಾರಾಯಣ, ಸಚಿನ್‌ನಾರಾಯಣ ಬಿನ್ ಲೇಟ್ ಹೆಚ್ .ಜಿ.ನಾರಾಯಣ ಇವರಿಗೆ ರಿ.ನಂ.3071/2008-09, ದಿ27.12.2008ರಂತೆ ಮಾರಾಟ ಮಾಡಿದ್ದು, ಎಂ.ಆರ್ .ನಂ.40/2008-09 ರಂತೆ ಕಂದಾಯ ದಾಖಲೆಗಳಲ್ಲಿ ಖಾತೆ ಆಗಿರುತ್ತದೆ. |

| | | |
|---|---|---|
| | | ಹರಾಜು ಪ್ರಕ್ರಿಯಲ್ಲಿ ಅಂತಿಮವಾಗಿ ಹರಾಜು ಆಗಿದ್ದ 28-28 ಎಕರೆ/ಗುಂಟೆ ವಿಸ್ತೀರ್ಣದ ಪೈಕಿ ಒತ್ತುವರಿಯನ್ನು ಹೊರತುಪಡಿಸಿ, ಸರ್ವೆ ನಕ್ಷೆಯಂತೆ ಖುಲ್ಲಾ ಇದ್ದ 23-14 ಎಕರೆ/ಗುಂಟೆ ವಿಸ್ತೀರ್ಣಕ್ಕೆ ಫಾರಂ-41ನ್ನು ನೀಡಿ, ದಿನಾಂಕ: 27.12.2008 ರಂದು ನೋಂದಣಿ ಮಾಡಲಾಗಿರುತ್ತದೆ. ಆದರೆ, ಪ್ರಸ್ತಾಪಿತ ಜಮೀನನ್ನು ಹಸ್ತಾಂತರ ಮಾಡುವ ಮೊದಲೇ ಹರಾಜಿನಲ್ಲಿ ಖರೀದಿಸಿದ ಬಿಡ್‌ದಾರರು ಬೇರೆಯವರಿಗೆ ಮಾರಾಟ ಸಹ ಮಾಡಿದ್ದು, ಕ್ರಯ ಪತ್ರದಂತೆ ಕಂದಾಯ ದಾಖಲೆಗಳಲ್ಲಿ ಖಾತೆ ದಾಖಲಾಗಿರುತ್ತದೆ. |
| ಇ) | ಈ ಸರ್ವೆ ನಂ.25 ಅನ್ನು ಕೆಲವರು ಒತ್ತುವರಿ ಮಾಡಿರುವ ಕಾರಣ ಬೇರೊಂದು ಸ್ಥಳವನ್ನು ನೀಡುವಂತೆ ಹರಾಜಿನಲ್ಲಿ ಖರೀದಿಸಿದ ವ್ಯಕ್ತಿಯು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆಯೇ ಸಲ್ಲಿಸಿದ್ದಲ್ಲಿ ಸದರಿ ಅರ್ಜಿಯ ಪ್ರತಿಯನ್ನು ನೀಡುವುದು? | ಸರ್ವೆ ನಂ.25 ಅನ್ನು ಕೆಲವರು ಒತ್ತುವರಿ ಮಾಡಿರುವ ಕಾರಣ ಬೇರೊಂದು ಸ್ಥಳವನ್ನು ನೀಡುವಂತೆ ಹರಾಜಿನಲ್ಲಿ ಖರೀದಿಸಿದ ಶ್ರೀ ಸಿ.ರಾಮಯ್ಯ ರೆಡ್ಡಿ ಬಿನ್ ಲೇಟ್ ಚಿನ್ನಪ್ಪರೆಡ್ಡಿ ಇವರು ಅರ್ಜಿ ಸಲ್ಲಿಸಿರುವುದಿಲ್ಲ. |

ಸಂಖ್ಯೆ: ಆರ್‌ಡಿ 38 ಎಲ್‌ಜಿಕ್ಯೂ 2023

(ಆರ್.ಅಶೋಕ)
ಕಂದಾಯ ಸಚಿವರು